**ದಿನಾಂಕ:06.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಹಾನಗಲ್ ತಾಲೂಕಿನ ಚಿಕ್ಕಹುಲ್ಲಾಳ ಗ್ರಾಮದ ಸರ್ವೇ ನಂ.9/1 ಮತ್ತು 9/2 ರ ಒಟ್ಟು 30 ಗುಂಟೆ ಜಮೀನನ್ನು ಸರ್ಕಾರದವರು ಭೂಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ನಿಜ. ಸರ್ಕಾರದವರು ಸದರಿ 30 ಗುಂಟೆ ಜಮೀನಿನಲ್ಲಿ ಪ್ಲಾಟ್ ಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ವಾಸಿಸಲು ಕೊಟ್ಟಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ.

5. ಆ ದಿನ ನಾನು ನಮ್ಮ ಮೇಲಾಧಿಕಾರಿಗಳ ಮೌಖಿಕ ಅನುಮತಿಯನ್ನು ಫೋನ್ ಮೂಲಕ ಪಡೆದುಕೊಂಡು ಘಟನಾ ಸ್ಥಳಕ್ಕೆ ಪಂಚನಾಮೆಗೆ ಸಹಕರಿಸುವ ಸಲುವಾಗಿ ಹೋಗಿರುತ್ತೇನೆ. ಆದರೆ ಲಿಖಿತ ಅನುಮತಿಯನ್ನು ಪಡೆದಿಲ್ಲ. ಸರ್ಕಾರದ ಕಚೇರಿಯಲ್ಲಿ ಕೆಲಸ ನಿರ್ವಹಿಸುವ ಅವಧಿಯಲ್ಲಿ ಇತರೆ ಕೆಲಸಕ್ಕಾಗಿ ಕಚೇರಿಯಿಂದ ಹೊರಗಡೆ ಹೋಗಬೇಕಾದರೆ ನಮ್ಮ ಚಲನ-ವಲನ ವಹಿಯಲ್ಲಿ ಕಾರಣ ಮತ್ತು ಸಮಯ ನಮೂದಿಸಿ ಹೋಗಬೇಕಾಗುತ್ತದೆ ಎಂದರೆ ನಿಜ. ನಾನು ಆ ದಿನ ಸ್ಥಳ ಪಂಚನಾಮೆಗೆ ಹೋಗುವ ಸಲುವಾಗಿ ಸದರಿ ವಿಚಾರವನ್ನು ಮತ್ತು ಸಮಯವನ್ನು ನಮ್ಮ ಚಲನ-ವಲನ ವಹಿಯಲ್ಲಿ ನಮೂದಿಸಿ ಹೋಗಿರುತ್ತೇನೆ. ಸದರಿ ಚಲನ-ವಲನ ವಹಿಯ ನಕಲನ್ನು ತನಿಖಾಧಿಕಾರಿಗೆ ನಾನು ಕೊಟ್ಟಿರುವುದಿಲ್ಲ.

6. ಘಟನಾ ಸ್ಥಳಕ್ಕೆ ಪಂಚನಾಮೆಗಾಗಿ ಬನ್ನಿ ಎಂದು ಹೇಳಲು ನನಗೆ ಪೊಲೀಸರು ನೋಟೀಸನ್ನು ಕೊಟ್ಟಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಪೋಟೋ ತೆಗೆಸಿಕೊಂಡಿರುತ್ತೇನೆ ಎಂದರೆ ನಿಜ. ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಅಂಗಡಿಯಲ್ಲಿ ಚಪ್ಪಲಿಗಳು, ಹಾರೆ ಮತ್ತು ಕೊಡ್ಲಿ ಸಿಗುತ್ತವೆ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.